# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಕೆ.ಎನ್.ಗೋವಿಂದಯ್ಯ, ಕಾರ್ಯದರ್ಶಿ, ಮಂಚನಬೆಲೆ ಗ್ರಾಮ ಪಂಚಾಯತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು – ಆದೇಶ.

ಓದಲಾಗಿದೆ:
1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಉಪಲೋಕ್/ಬಿಡಿ–317/2017/ಡಿಆರ್‌ಇ–1, ದಿನಾಂಕ: 16–11–2017.
2. ಮಾನ್ಯ ಉಪಲೋಕಾಯಕ್ತರವರ ವರದಿ ಸಂಖ್ಯೆ:ಕಂಪ್ಲೇಂಟ್/ಉಪಲೋಕ್/ಬಿಡಿ/317/2017/ಡಿಆರ್‌ಇ–1, ದಿನಾಂಕ: 09/12–10–2017.

ಪ್ರಸ್ತಾವನೆ:

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ದಿನಾಂಕ: 16.11.2017 ರವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 12(3) ರನ್ವಯ ಮಾನ್ಯ ಉಪಲೋಕಾಯುಕ್ತರವರ ಸಲ್ಲಿಸಿರುವ ವರದಿಯಲ್ಲಿ ಶ್ರೀ ಹೆಚ್.ಆರ್.ರವಿ ಬಿನ್ ಲೇಟ್.ಹೆಚ್.ಸಿ.ರುದ್ರಯ್ಯ, ಹಳೇಹಳ್ಳಿ, ಮಂಚೇನಹಳ್ಳಿ ಹೋಬಳಿ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ ಕೆ.ಎನ್. ಗೋವಿಂದಯ್ಯ, ಕಾರ್ಯದರ್ಶಿ, ಮಂಚನಬೆಲೆ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

ದೂರುದಾರರು ತಮ್ಮ ದೂರಿನಲ್ಲಿ ಕೆ.ಎನ್. ಗೋವಿಂದಯ್ಯರವರು ಮಂಚೇನಹಳ್ಳಿಯಲ್ಲಿ ದೊಡ್ಡ ಮನೆ ಕಟ್ಟಿರುತ್ತಾರೆ. ಚಿಕ್ಕಬಳ್ಳಾಪುರ ಪ್ರಶಾಂತನಗರ ತಿಮ್ಮಕ್ಕ ಬಡಾವಣೆಯಲ್ಲಿ 2 ಅಂತಸ್ತಿನ ಮನೆ ಹಾಗೂ ಕಾರನ್ನು ಹೊಂದಿರುತ್ತಾರೆ. ಬಿಲ್ ಕಲೆಕ್ಟರ್ ಆಗಿ ಸುಳ್ಳು ದಾಖಲೆಗಳನ್ನು ಕೊಟ್ಟು ಕಾರ್ಯದರ್ಶಿ ಹುದ್ದೆ ಪಡೆದಿರುತ್ತಾರೆ. ಬಿಲ್ ಕಲೆಕ್ಟರ್ ಆಗಿದ್ದ ಸಮಯದಲ್ಲಿ ಗೌರಿಬಿದನೂರು ತಾಲ್ಲೂಕು, ಗೌಡಗೆರೆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯಲೋಪ ಎಸಗಿ ಪ್ರಕರಣಗಳು ದಾಖಲಾಗಿ ವಿವಾದಗಳು ನಡೆಯುತ್ತಿರುವಾಗ ಚಿಂತಾಮಣಿ ತಾಲ್ಲೂಕು, ಇರಗಂಪಲ್ಲಿ ಗ್ರಾಮ ಪಂಚಾಯಿತಿಯಿಂದ ಪ್ರಭಾರ ಸೇವೆಯಾಗಿ ಪೆದ್ದೂರು ಗ್ರಾಮಪಂಚಾಯಿತಿ ಮುರುಗಮಲ್ಲಾ ಹೋಬಳಿಯಲ್ಲಿ ಕೆಲಸ ಮಾಡಿ ಅಲ್ಲಿಂದ ಚಿಕ್ಕಬಳ್ಳಾಪುರ ತಾಲ್ಲೂಕು, ಕಸಬಾ ಹೋಬಳಿ, ಅಂಗರೇಕನಹಳ್ಳಿ ಗ್ರಾಮಪಂಚಾಯಿತಿಯಲ್ಲಿ ಅವ್ಯವಹಾರಗಳು ದಾಖಲಾಗಿ ಅಮಾನತ್ತುಗೊಂಡು ಈಗಲೂ ಚಿಕ್ಕಬಳ್ಳಾಪುರ ಸಿವಿಲ್ ನ್ಯಾಯಾಲಯದಲ್ಲಿ ಸಿ.ಸಿ.314/12 ರಂತೆ ಪ್ರಕರಣ ಚಾಲ್ತಿಯಲ್ಲಿರುತ್ತದೆ. ಪರಿಸ್ಥಿತಿ ಹೀಗಿರುವಾಗ ಅಮಾನತ್ತುಗೊಂಡಿದ್ದರೂ ಸಹ ರಾಜಕಾರಣಿಗಳ ಶಿಫಾರಸ್ಸಿನಿಂದ ಮಂಚನಬೆಲೆಯಲ್ಲಿ ಅಧಿಕಾರ ವಹಿಸಿಕೊಂಡು ಕರ್ತವ್ಯ ನಿರ್ವಹಿಸಿದ್ದಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

ದೂರುದಾರರ ದೂರಿನ ಮೇಲೆ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದಿ. 6/8/1998 ರಲ್ಲಿ ಸರ್ಕಾರದ ಅಧಿಕೃತ ಜ್ಞಾಪನ ಪತ್ರದ ಸಂ.350 ಗ್ರಾಪಂಕಾ 95 ದಿ. 14.08.1998 ಮತ್ತು 24/2/1998ರ ಆದೇಶದಂತೆ ಜಿಲ್ಲೆಯಲ್ಲಿ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಾಗಿ ನೇಮಕಗೊಂಡ 61 ಅಭ್ಯರ್ಥಿಗಳಲ್ಲಿ ಕ್ರಮ ಸಂ. 51ರ ಮೂಲಕ ಇರಂಗಂಪಲ್ಲಿ ಗ್ರಾಮ ಪಂಚಾಯಿತಿ ಚಿಂತಾಮಣಿ ತಾಲ್ಲೂಕಿನಲ್ಲಿ ಸೇವೆಗೆ ಹಾಜರಾಗಿರುತ್ತಾರೆ. ಗೌರಿಬಿದನೂರು ತಾಲ್ಲೂಕು, ಮಂಚೇನಹಳ್ಳಿ ಗ್ರಾಮದಲ್ಲಿ ಎದುರುದಾರರ ತಂದೆ ನಂಜುಂಡಪ್ಪರವರಿಂದ ಪಿತ್ರಾರ್ಜಿತವಾಗಿ 60*20 ಅಡಿ ನಿವೇಶನದಲ್ಲಿ 2003 ನೇ ವರ್ಷದಲ್ಲಿ ವೈಶ್ಯ ಬ್ಯಾಂಕ್ ಶಾಖೆ ಮಂಚೇನಹಳ್ಳಿ ಬ್ಯಾಂಕ್‌ನಿಂದ ರೂ. 1,00,000/-ಗಳ ಮನೆ ಸಾಲ ಪಡೆದು ಕುಟುಂಬದ ಇತರೆ ಉಳಿತಾಯದ ಮೂಲಗಳು ಮತ್ತು ಕೃಷಿ ಆದಾಯದಿಂದ ಬಂದ ಹಣದಿಂದ ಮನೆ ಕಟ್ಟಿರುತ್ತಾರೆ.

ರಿಜಿಸ್ಟರ್ ನಂ. ಕೆಎ 08 ಎಂ 0848 ವಾಹನ ಎದುರುದಾರರ ಅಣ್ಣನ ಮಗ ಕೆ.ಎಲ್.ಮಂಜುನಾಥ ಬಿನ್ ಲಿಂಗಯ್ಯರವರಿಗೆ ಸೇರಿದ್ದು, ಅವರು ಬೆಂಗಳೂರಿನಲ್ಲಿ ವಾಸಿಸುತ್ತಿದ್ದು, ಅವರ ವಾಹನವನ್ನು ಆಗಾಗ ಗ್ರಾಮಕ್ಕೆ ಬಂದು ಹೋಗಲು ಉಪಯೋಗಿಸುತ್ತಿರುತ್ತಾರೆ. ಚಿಕ್ಕಬಳ್ಳಾಪುರ ನಗರ ಎಪಿಎಂಸಿ ಯಾರ್ಡ್ ಪೂರ್ವ ಭಾಗದ ನಗಧಿ ಕೃಷ್ಣಪ್ಪ ಲೇಔಟ್‌ನಲ್ಲಿ 30*40 ನಿವೇಶನವನ್ನು ಖರೀದಿಸಿ, 2013ನೇ ವರ್ಷದಲ್ಲಿ ನಗರದ ಜಿಲ್ಲಾಢಳಿತ ಭವನದ ಆವರಣದಲ್ಲಿರುವ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿ ರೂ. 6. ಲಕ್ಷಗಳನ್ನು ಎದುರುದಾರರ ಪತ್ನಿ ಶ್ರೀಮತಿ ಲಲಿತಮ್ಮ ಇವರ ಹೆಸರಿನಲ್ಲಿ ಪಡೆದು ಸ್ವಂತಕ್ಕೆ ಮನೆ ಕಟ್ಟಿರುತ್ತಾರೆ. ಇದರ ಬಾಬ್ತು ಪ್ರತಿ ತಿಂಗಳು ರೂ. 7,000/–ಕಂತುಗಳಲ್ಲಿ ಸಂಬಳದಲ್ಲಿ ಕಡಿತಗೊಳಿಸಿ ಸಾಲ ಮರುಪಾವತಿಸಲಾಗುತ್ತಿದೆ. ಚಿಕ್ಕಬಳ್ಳಾಪುರ ತಾಲ್ಲೂಕಿನ ಅಂಗರೇಖನಹಳ್ಳಿ ಗ್ರಾಮ ಪಂಚಾಯಿತಿ, ಅಂಗರೇಖನಹಳ್ಳಿ ಗ್ರಾಮದ ಸ.ನಂ ಸರ್ಕಾರಿ ಜಮೀನಿನಲ್ಲಿ ನಿವೇಶನ ಖಾತೆ ಮಾಡಿರುವುದಾಗಿ ಆರೋಪಿಸಿ ಎದುರುದಾರರು ಮತ್ತು ಅಂದಿನ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮುನಿಯಮ್ಮ ರವರ ಮೇಲೆ 2012ರಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯ ಚಿಕ್ಕಬಳ್ಳಾಪುರ ಇಲ್ಲಿ 314/2012ರಲ್ಲಿ ಕೇಸ್ ದಾಖಲಾಗಿರುತ್ತದೆ. ನಂತರ ದಿ. 3/12/2016 ರಲ್ಲಿ ಸದರಿ ಕೇಸ್ ಮುಕ್ತಾಯಗೊಂಡು ದೋಷಮುಕ್ತರಾಗಿರುತ್ತಾರೆಂದು ತಿಳಿಸಿರುತ್ತಾರೆ.

ಎದುರುದಾರರ ಆಕ್ಷೇಪಣೆಯ ಮೇಲೆ ದೂರುದಾರರು ಪ್ರತ್ಯುತ್ತರವನ್ನು ಸಲ್ಲಿಸಿದ್ದು, ಪ್ರತ್ಯುತ್ತರದಲ್ಲಿ ಎದುರುದಾರರು ಅವರ ಹೆಂಡತಿಯ ನಿವೇಶನ ಖರೀದಿಸಲು ಹಾಗೂ ಮನೆ ಕಟ್ಟಲು ಇಲಾಖಾ ಅನುಮತಿ ಪಡೆದಿರುತ್ತಾರೆಯೇ ಎನ್ನುವ ಬಗ್ಗೆ ಮಾಹಿತಿ ನೀಡಿಲ್ಲ; ದಿ 6.08.1998 ರಲ್ಲೂ ಸರ್ಕಾರದ ಆದೇಶಾನುಸಾರ ಹುದ್ದೆ ಸ್ವೀಕರಿಸುವ ಪೂರ್ವದಲ್ಲಿ ಕೇವಲ 5 ವರ್ಷ ಮಾತ್ರ ಬಿಲ್ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿರುತ್ತಾರೆ. ನೇಮಕಾತಿ ಸಮಯದಲ್ಲಿ 10 ವರ್ಷ ಬಿಲ್ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿರುತ್ತಾರೆಂದು ಸುಳ್ಳು ಮಾಹಿತಿ ನೀಡಿ ಉದ್ಯೋಗ ಗಿಟ್ಟಿಸಿಕೊಂಡಿರುತ್ತಾರೆಂದು ಹೇಳಿರುತ್ತಾರೆ.

ದೂರುದಾರರು ಹಾಗೂ ಪ್ರತ್ಯುತ್ತರವನ್ನು ಪರಿಶೀಲಿಸಿದಾಗ, ಎದುರುದಾರರು ಸುಳ್ಳು ಮಾಹಿತಿಯನ್ನು ನೀಡಿ ಸರ್ಕಾರಿ ಉದ್ಯೋಗವನ್ನು ಪಡೆದಿರುತ್ತಾರೆ ಮತ್ತು ಆಸ್ತಿ ಖರೀದಿಸಲು ಹಾಗು ಮನೆ ಕಟ್ಟಲು ಇಲಾಖಾ ಅನುಮತಿಯನ್ನು ಪಡೆದಿರುವುದಿಲ್ಲವೆಂದು ಹೇಳಿದ್ದು, ಸದರಿ ಅಂಶಗಳನ್ನು ಪರಿಶೀಲಿಸಲು ದಾಖಲಾತಿಗಳನ್ನು ಪರಿಶೀಲಿಸುವ ಅಗತ್ಯತೆ ಕಂಡುಬಂದ ಕಾರಣ, ದೂರುದಾರರ ದೂರು ಹಾಗೂ ಪ್ರತ್ಯುತ್ತರವನ್ನು ಪೊಲೀಸ್ ಅಧಿಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಇವರಿಗೆ ಕಳುಹಿಸಿ ದೂರುದಾರರು ಮಾಡಿರುವ ಆಪಾದನೆಗಳ ಬಗ್ಗೆ ತನಿಖೆ ನಡೆಸಿ ದಾಖಲಾತಿಗಳ ಸಮೇತ ವರದಿ ನೀಡುವಂತೆ ಆದೇಶಿಸಲಾಗಿತ್ತು. ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಇವರು ವರದಿಯನ್ನು ಸಲ್ಲಿಸಿದ್ದು, ಈ ಕೆಳಗಿನಂತೆ ಅಭಿಪ್ರಾಯ ನೀಡಿರುತ್ತಾರೆ.

> "ಕೆ.ಎನ್.ಗೋವಿಂದಯ್ಯರವರು ದಿ:21.12.1987 ರಂದು ಗೌಡಗೆರೆ ಮಂಡಲ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟರ್ ಆಗಿ ನೇಮಕ ಹೊಂದಿ ದಿ:27.7.1998 ನೇ ಸಾಲಿಗೆ 10 ವರ್ಷ ಸೇವೆ ಸಲ್ಲಿಸಿರುವುದರಿಂದ ಕಾರ್ಯದರ್ಶಿ ಹುದ್ದೆಗೆ ನೇಮಕಾತಿ ಮಾಡಿರುತ್ತಾರೆ. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಕೆ.ಎನ್. ಗೋವಿಂದಯ್ಯ ರವರು 5 ವರ್ಷಗಳು ಮಾತ್ರ ಬಿಲ್ ಕಲೆಕ್ಟರ್ ಆಗಿ ಸೇವೆ ಸಲ್ಲಿಸಿ ನಕಲಿ ದಾಖಲೆಗಳ್ನು ನೀಡಿ ಕಾರ್ಯದರ್ಶಿ ಹುದ್ದೆ ಪಡೆದಿರುತ್ತಾರೆಂಬ ಆರೋಪ ಸಾಬೀತಾಗಿರುವುದಿಲ್ಲ.
>
> ಕೆ.ಎನ್.ಗೋವಿಂದಯ್ಯರವರು ಮಂಚೇನಹಳ್ಳಿ ಮತ್ತು ಚಿಕ್ಕಬಳ್ಳಾಪುರ ನಗರದಲ್ಲಿ ತಮ್ಮ ಪತ್ನಿಯ ಹೆಸರಿನಲ್ಲಿ ನಿವೇಶನಗಳನ್ನು ಖರೀದಿಸಿ ಮನೆಗಳನ್ನು ಕಟ್ಟಲು ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿಯನ್ನು ಪಡೆದಿರುವುದಿಲ್ಲ. ಆದರೆ ಇವರು 2014–15ನೇ ಸಾಲಿನ ಆಸ್ತಿ ದಾಯಿತ್ವ ಪತ್ರದಲ್ಲಿ ಮಂಚೇನಹಳ್ಳಿ ಮತ್ತು ಚಿಕ್ಕಬಳ್ಳಾಪುರ ನಗರದ ಮನೆಗಳ ಆಸ್ತಿಗಳ ವಿವರಗಳನ್ನು ಮತ್ತು ಮೌಲ್ಯವನ್ನು ನಮೂದಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿಕೊಂಡಿರುವುದು ಕಂಡುಬಂದಿರುವುದರಿಂದ ಇವರು ಸೇವಾ ನಿಯಮಗಳನ್ನು ಭಾಗಶಃ ಉಲ್ಲಂಘನೆ ಮಾಡಿ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರಿಸಿರುವುದು ಕಂಡುಬಂದಿರುತ್ತದೆ" ಎಂದು ಅಭಿಪ್ರಾಯ ನೀಡಿರುತ್ತಾರೆ.

ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಸೇವಾ ನಿಯಮಗಳನ್ನು ಭಾಗಶಃ ಉಲ್ಲಂಘನೆ ಮಾಡಿ ಕರ್ತವ್ಯದಲ್ಲಿ ನಿರ್ಲಕ್ಷತೆ ತೋರಿಸಿರುವುದು ಕಂಡುಬಂದಿರುತ್ತದೆಯೆಂದು ಅಭಿಪ್ರಾಯ ನೀಡಿರುವುದರಿಂದ, ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ.

ಆದುದರಿಂದ, ಎದುರುದಾರರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಹಾಗೂ ತನಿಖಾಧಿಕಾರಿಯ ವರದಿಯನ್ನು ಅಲ್ಲಗಳೆಯಲು ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ಕೆ.ಸಿ.ಎಸ್.ಆರ್ ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966ರ ನಿಯಮ 3(1) (ii) ಮತ್ತು (iii) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಶ್ರೀ ಕೆ.ಎನ್.ಗೋವಿಂದಯ್ಯ, ಕಾರ್ಯದರ್ಶಿ, ಮಂಚನಬೆಲೆ ಗ್ರಾಮ ಪಂಚಾಯಿತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/847/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 08-12-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಕೆ.ಎನ್.ಗೋವಿಂದಯ್ಯ, ಕಾರ್ಯದರ್ಶಿ, ಮಂಚನಬೆಲೆ ಗ್ರಾಮ ಪಂಚಾಯತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ ಇವರ ವಿರುದ್ಧದ ಆಪಾದನೆಗಳ ಬಗ್ಗೆ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957 ರ 14-ಎ ಅಡಿಯಲ್ಲಿ ಈ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶಿಸಲಾಗಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ-8ರ ಅಡಿ ಸೂಚಿತವಾದ ಯಾವುದಾದರೊಂದು ಅಥವಾ ಹೆಚ್ಚಿನ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

8/12

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ:**

1) ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.

2) ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ ಸಂಖ್ಯೆ 1 ರಿಂದ 133 ರವರೆಗಿನ ಮೂಲದಾಖಲೆಗಳನ್ನು ಈ ಪತ್ರದೊಂದಿಗೆ ಹಿಂದಿರುಗಿಸಲಾಗಿದೆ)
4) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರ ಜಿಲ್ಲೆ .
5) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಚಿಕ್ಕಬಳ್ಳಾಪುರ, ಚಿಕ್ಕಬಳ್ಳಾಪುರ ಜಿಲ್ಲೆ.
6) ಶ್ರೀ ಕೆ.ಎನ್ ಗೋವಿಂದಯ್ಯ, ಕಾರ್ಯದರ್ಶಿ, ಮಂಚನಬೆಲೆ ಗ್ರಾಮ ಪಂಚಾಯತಿ, ಚಿಕ್ಕಬಳ್ಳಾಪುರ ತಾಲ್ಲೂಕು ಮತ್ತು ಜಿಲ್ಲೆ.
7) ಗಣಕ ಕೋಶ.
8) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.